# ಆರು ಬದುಕಿದರಯ್ಯ ಹರಿ ನಿನ್ನ ನಂಬಿ

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page No. 128.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 47.
3. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 280.
4. **Note:** There are few differences in the lyrics in these references. These differences are not considered here and taken only the lyrics from Ref. 1 as standard. Singer has followed these lyrics.

ರಾಗ: ಕಾಂಬೋಧಿ ತಾಳ: ಝಂಪೆ

ಆರು ಬದುಕಿದರಯ್ಯ ಹರಿ ನಿನ್ನ ನಂಬಿ || ಪ ||
ತೋರು ಈ ಜಗದೊಳಗೆ ಒಬ್ಬರನು ಕಾಣೆ || ಅಪ ||

ಕಲಹ ಬಾರದ ಹಾಗೆ ಕರ್ಣನನು ನೀ ಕೊಂದೆ
ಸುಲಭದಲಿ ಕೌರವರ ಮನೆಯ ಮುರಿದೆ
ನೆಲನ ಬೇಡುಲು ಪೋಗಿ ಬಲಿಯ ತಲೆಯನು ತುಳಿದೆ
ಮೊಲೆಯನುಣಿಸಲು ಬಂದ ಪೂತನಿಯ ಕೊಂದೆ || ೧ ||

ಕರಪತ್ರದಿಂದ ತಾಮ್ರಧ್ವಜನ ತಂದೆಯ
ಕೊರಳ ಕೊಯಿಸಿದೆ ನೀನು ಕುಂದಿಲ್ಲದೆ
ಮರುಳನಂದದಿ ಪೋಗಿ ಭೃಗು ಮುನಿಯ ಕಣ್ಣೊಡೆದೆ
ಅರಿತು ನರಕಾಸುರನ ಹೆಂಡಿರನು ಬೆರೆದೆ || ೨ ||

ತಿರಿದುಂಬ ದಾಸರ ಕೈಲಿ ಕಪ್ಪವ ಕೊಂಬೆ
ಗರುಡವಾಹನ ನಿನ್ನ ಚರಿಯನರಿಯೆ

ದೊರೆ ಪುರಂದರ ವಿಠಲ ನಿನ್ನನ್ನು ನಂಬಿದರೆ
ತಿರುಪೆಯೂ ಹುಟ್ಟಲೊಲ್ಲದು ಕೇಳೊ ಹರಿಯೇ || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಇದು ನಿಂದಾಸ್ತುತಿ. ಜನರ ಕಣ್ಣಿಗೆ ತಪ್ಪೆಂದು, ಮೋಸವೆಂದು, ಕ್ರೌರ್ಯವೆಂದು ಕಂಡರೂ ಹರಿಯ ಲೀಲೆಯಲ್ಲಿ ಲೋಕೋಪಕಾರ ಬುದ್ಧಿಯೇ ಇರುವುದು. ಲೋಕ ಕಂಟಕರಾದವರ ಬಲಗುಂದಿಸಲು, ಅವರನ್ನು ತೊಲಗಿಸಲು ಹರಿಯ ಲೀಲೆ. ಶಿಷ್ಟ ರಕ್ಷಣೆಯ ಸಲುವಾಗಿ ದುಷ್ಟಶಿಕ್ಷಣ. ಇಲ್ಲಿ ದುಷ್ಟ ಶಿಕ್ಷಣವನ್ನೇ ಎತ್ತಿ ತೋರಿಸಿದ್ದಾರೆ.

**ತಾಮ್ರಧ್ವಜ...** – ಮಣಿಪುರದ ರಾಜ ಮಯೂರಧ್ವಜನ ಮಗ. ಯುಧಿಷ್ಠಿರನು ಅಶ್ವಮೇಧ ಯಾಗ ಮಾಡುವಾಗ ಯಾಗದ ಕುದುರೆಯನ್ನು ಅಡ್ಡಗಟ್ಟಿ, ಸೆಣಸಲು ಬಂದ ಅರ್ಜುನನನ್ನು ಸೋಲಿಸಿದ. ಕೃಷ್ಣಾರ್ಜುನರು ಮೋಸದಿಂದ ಮಯೂರಧ್ವಜನ ಬಳಿಹೋಗಿ ಅವನು ತಾಮ್ರಧ್ವಜನ ಶರೀರವನ್ನು ಇಬ್ಭಾಗವಾಗಿ ಗರಗಸ (ಕರಪತ್ರ)ದಿಂದ ಕುಯ್ಯುವಂತೆ ಮಾಡಿದರು.

**ಭೃಗಮುನಿ...** – ಸರಸ್ವತೀ ನದಿಯ ದಡದ ಮೇಲೆ ಋಷಿಗಳು ಯಜ್ಞ ಮಾಡುತ್ತ, ಅಗ್ರ ಪೂಜೆಯನ್ನು ಯಾವ ದೇವತೆಗೆ ಸಲ್ಲಿಸಬೇಕೆಂಬ ವಿಚಾರವಾಗಿ ವಿವಾದವೊದಗಿ, ಭೃಗುಮುನಿಯು ತ್ರಿಮೂರ್ತಿಗಳ ಸತ್ತ್ವಪರೀಕ್ಷೆಮಾಡಲು ಹೊರಟಾಗ, ವೈಕುಂಠದಲ್ಲಿ ನಾರಾಯಣನು ಲಕ್ಷ್ಮಿಯೊಂದಿಗೆ ಸುಖನಿದ್ರೆಯಲ್ಲಿದ್ದು ತಾನು ಬಂದುದನ್ನೂ ಅರಿಯದೆ ಇರಲು ಭೃಗುಮುನಿಯು ಸಿಟ್ಟಿಗೆದ್ದು ನಾರಾಯಣನನ್ನು ತನ್ನ ಬಲಗಾಲಿನಿಂದ ಒದ್ದ. ಒಡನೆಯೇ ನಾರಾಯಣನು ಎದ್ದು ಕ್ಷಮೆಯನ್ನು ಬೇಡುತ್ತ, ಮುನಿಯ ಕಾಲಿಗೆಷ್ಟು ನೋವಾಯಿತೋ ಎಂದು ಅವನ ಕಾಲುಗಳನ್ನು ಒತ್ತುತ್ತ ಕಾಲಿನಲ್ಲಿದ್ದ ಕಣ್ಣನ್ನು ಕಿತ್ತುಬಿಟ್ಟ. ಕಾಲಲ್ಲಿ ಕಣ್ಣಿದ್ದುದರಿಂದಲೇ ಭೃಗುಮುನಿಗೆ ಅಹಂಕಾರವಿದ್ದಿತು.

**ಅರಿತು ತ್ರಿಪುರಾಸುರನ...** – ಬೌದ್ಧಾವತಾರದಲ್ಲಿ.

**ನರಕಾಸುರ** = ನರಕಾಸುರನು ಪ್ರಾಗ್ ಜ್ಯೋತಿಷ ಪುರದ ರಾಜ. ಇವನು ಕೃಷ್ಣನ ಪ್ರತಿ ವಾದಿ. ಇವನು ಭರತಖಂಡ ಮತ್ತು ದೇವತೆಗಳನ್ನೆಲ್ಲ ಗೆದ್ದು ೧೬೦೦೦ ರಾಜ ಪುತ್ರಿಯರನ್ನೂ, ಗಂಧರ್ವ ಕನ್ನೆಯರನ್ನೂ ತನ್ನ ಸೆರೆಮನೆಯಲ್ಲಿ ಇರಿಸಿದನು. ಕೃಷ್ಣನು ಇವನನ್ನು ಕೊಂದು ಇವರ ಸೆರೆ ಬಿಡಿಸಿ ತಾನೇ ಸ್ವೀಕರಿಸಿದನು.

**ಕಲಹ ಬಾರದ ಹಾಗೆ...** – ಮಹಾಭಾರತ ಯುದ್ಧದಲ್ಲಿ ಕರ್ಣಾರ್ಜುನರು ಕಾದಾಡುತ್ತಿರುವಾಗ ಕರ್ಣನ ಮರ್ಮವನ್ನು ಹೊರಗೆಡಹಿ, ಅರ್ಜುನನನ್ನು ಪ್ರೋತ್ಸಾಹಿಸಿ, ಕರ್ಣನನ್ನು ಕೊಲಿಸಿದನು. ಕೊಂದವನು ದಿಟವಾಗಿ ಅರ್ಜುನ; ಆದರೆ ಅವನು ನಿಮಿತ್ತಮಾತ್ರ.

**ಸಲುಭದಲಿ...** – ಪಾಂಡವರ ಪಕ್ಷವನ್ನು ಹಿಡಿದು ಕೌರವ ವಂಶವನ್ನು ನಿರ್ಮೂಲ ಮಾಡಿದನು.

**ನೆಲವ ಬೇಡುತ...** – ವಾಮನಾವತಾರದಲ್ಲಿ.

**ಮೊಲೆಯನುಣಿಸಲು...** – ಪೂತನೀ ಸಂಹಾರದ ಪ್ರಸಂಗ (ಕೃಷ್ಣನ ಬಾಲಲೀಲೆ).

**ಕರಪತ್ರ** = ಕರಗಸ

**ಚರ್ಯೆ** = ಚರಿತ್ರೆ

**ತಿರುಪೆ** = ಭಿಕ್ಷೆ

**Classification:** Keerthane
**Ankita:** purandara vittala
**Location:** NA
**Category:** Jeevanoddhara, Aartha bhava,
**Sub-Category:** Krishna, loka, bali, putani, asura, garuda, bhikshe, kai, muni, kourava, kudure, mane, kannu, dhwaja, baduku, karna, tande, bhrugu, hendati, huttu,
**Pravachana:** NA
**Explanation:** Dr. Vijayendra Desai, Dharwad.